# ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 2021-22ನೇ ಸಾಲಿನ ವಾರ್ಷಿಕ ವರದಿ

**ಪರಿಚಯ:**

2000ರ ಇಸವಿಯಲ್ಲಿ ಮೌಲ್ಯಮಾಪನ ನೀತಿಯನ್ನು ರೂಪಿಸಿದ ದೇಶದ ಮುಂಚೂಣಿ ರಾಜ್ಯಗಳಲ್ಲಿ ಕರ್ನಾಟಕವೂ ಒಂದು ಆಗಿರುತ್ತದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಪಿಡಿ/8/ಇವಿಎನ್(2)/2011, ದಿನಾಂಕ: 11–07–2011ರಂದು ಸ್ಥಾಪಿಸಲಾಗಿರುತ್ತದೆ ಮತ್ತು ಈ ಪ್ರಾಧಿಕಾರವನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಅಡಿಯಲ್ಲಿ ನೋಂದಣಿ ಸಂಖ್ಯೆ ಡಿಆರ್‌ಬಿ–ಸಿ/ಎಸ್‌ಓಆರ್/140/2011–12, ದಿನಾಂಕ:19–09–2011ರನ್ವಯ ಒಂದು ಸಂಘವಾಗಿ ನೋಂದಾಯಿಸಲಾಗಿರುತ್ತದೆ. ಇದು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪ್ರಮುಖ ಕಾರ್ಯಚಟುವಟಿಕೆಗಳು:**

1. ಪರಿಣಾಮಕಾರಿಯಾಗಿ ಯೋಜನೆಯನ್ನು ರೂಪಿಸಲು, ಮೇಲ್ವಿಚಾರಣೆ ಮಾಡಲು, ಸಾಮರ್ಥ್ಯ ನಿರ್ಮಿಸಿ ಇಲಾಖೆಗಳೊಂದಿಗೆ ಕೈಜೋಡಿಸುವುದು ಹಾಗೂ ನೀತಿಗಳನ್ನು, ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಉತ್ತಮವಾಗಿ ಸುಗಮಗೊಳಿಸುವುದು
2. ಪರಿಣಾಮಕಾರಿಯಾಗಿ ಮತ್ತು ಅರ್ಥಪೂರ್ಣವಾಗಿ ಯೋಜನೆಯನ್ನು ರೂಪಿಸಲು, ಮೌಲ್ಯಮಾಪನ ಕೈಗೊಳ್ಳಲು, ಅದನ್ನು ಆಯೋಜಿಸಿ ಮೇಲ್ವಿಚಾರಣೆಯನ್ನು ಮಾಡಲು, ಸಮಾಲೋಚಿಸಲು, ಬೆಂಬಲಿಸಲು, ಹಾಗೂ ಮುಂದಿನ ಗುರಿಗಳನ್ನು ಸಾಧಿಸಲು ತರಬೇತಿಯನ್ನು ಕೈಗೊಳ್ಳುವುದು ಅಥವಾ ಯೋಜಿಸುವುದು.
3. ಮೌಲ್ಯಮಾಪನ ಅಧ್ಯಯನಗಳ ಶೋಧನೆಗಳನ್ನು ಪ್ರಸಾರ ಮಾಡಲು ಮತ್ತು ಮೌಲ್ಯಮಾಪನ ಫಲಿತಾಂಶಗಳನ್ನು ಬಳಕೆಯನ್ನು ಅನುಸರಿಸಲು ಮೌಲ್ಯಮಾಪನ ಅಧ್ಯಯನಗಳ ಉಲ್ಲೇಖ ನಿಯಮಗಳನ್ನು, ದತ್ತಾಂಶ ಸಂಗ್ರಹಣಾ ಸಾಧನಗಳನ್ನು ಮತ್ತು ಮೌಲ್ಯಮಾಪನ ವರದಿಗಳನ್ನು ದಾಖಲಿಸುವುದು.
4. ಯೋಜನಾ ಇಲಾಖೆಯ ಎಲ್ಲಾ ಪ್ರಮುಖ ಪ್ರಯತ್ನಗಳಲ್ಲಿ ಮತ್ತು ಜ್ಞಾನ ಸಹಭಾಗಿತ್ವದಲ್ಲಿ ಬೆಂಬಲ ನೀಡುವುದು.
5. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪ್ರತಿವರ್ಷವೂ ಸರ್ಕಾರಿ ಯೋಜನೆಗಳ/ಕಾರ್ಯಕ್ರಮಗಳ ಕುರಿತು ಕನಿಷ್ಟ 20ರಿಂದ 30 ಪ್ರಮುಖ ಮೌಲ್ಯಮಾಪನಗಳನ್ನು ಕೈಗೊಳ್ಳುವ ಗುರಿಯನ್ನು ಹೊಂದಿರುತ್ತದೆ.

**2021–22ರ ಭೌತಿಕ ಸಾಧನೆ**

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು 25 ಮೌಲ್ಯಮಾಪನ ಅಧ್ಯಯನಗಳನ್ನು ಪೂರ್ಣಗೊಳಿಸಿರುತ್ತದೆ.
- 15 ಬಾಹ್ಯ ಮತ್ತು 45 ಆಂತರಿಕ ಅಧ್ಯಯನಗಳು ಪ್ರಗತಿಯಲ್ಲಿವೆ.
- 127 ಅಧ್ಯಯನಗಳ ಕ್ರಮ ಕೈಗೊಂಡ ವರದಿಗಳು ಸ್ವೀಕೃತವಾಗಿರುತ್ತವೆ ಮತ್ತು 08 ಅಧ್ಯಯನಗಳ ಕ್ರಮ ಕೈಗೊಂಡ ವರದಿಗಳು ಬಾಕಿ ಇರುತ್ತವೆ.

ರೂ.100ಕೋಟಿಗಳ ಅನುದಾನವಿರುವ 21 ಯೋಜನೆಗಳ ಮೌಲ್ಯಮಾಪನ (ಸುಸ್ಥಿರ ಅಭಿವೃದ್ಧಿ ಗುರಿಗಳ ಕಡಿಮೆ ಪ್ರಗತಿ ಆಧಾರದ ಮೇಲೆ)

1. ರಾಷ್ಟ್ರೀಯ ಆರೋಗ್ಯ ಮಿಷನ್‌ನ ಮೌಲ್ಯಮಾಪನ (SDG–3)
2. ಐಸಿಡಿಎಸ್ ಕಾರ್ಯಕ್ರಮ
3. MNREGA ಯೋಜನೆ
4. ಸ್ವಚ್ಛ ಭಾರತ್ ಮಿಷನ್ ಹಂತ I (ನಗರ)
5. ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ (NFSM)
6. ಕೃಷಿ, ತೋಟಗಾರಿಕೆ ಇಲಾಖೆಯ SCP/TSP ಯೋಜನೆಗಳು,
7. ಜಲಸಂಪನ್ಮೂಲ ಇಲಾಖೆ ಇಲಾಖೆಯ SCP/TSP ಯೋಜನೆಗಳು
8. ಶಿಕ್ಷಣ ಇಲಾಖೆಯ SCP/TSP ಯೋಜನೆಗಳು,
9. ಉದ್ಯಮಶೀಲತೆ & ಕೌಶಲ್ಯ ಇಲಾಖೆಯ SCP/TSP ಯೋಜನೆಗಳು,
10. ಎಸ್‌ಎಂಇ ಘಟಕಗಳು & ಸ್ಟಾರ್ಟ್–ಅಪ್‌ಗಳ SCP/TSP ಯೋಜನೆಗಳು
11. ಪ್ರಧಾನ ಮಂತ್ರಿ ಆವಾಸ್ ಯೋಜನೆ
12. ಸಮಗ್ರ ಶಿಕ್ಷಣ ಮಿಷನ್
13. ಜಲ ಜೀವನ್ ಮಿಷನ್
14. ಪ್ರಧಾನ ಮಂತ್ರಿ ಗ್ರಾಮೀಣ ರಸ್ತೆ ಯೋಜನೆ
15. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
16. ಪ್ರದೇಶಾಭಿವೃದ್ಧಿ ಮಂಡಳಿಗಳ ಅಭಿವೃದ್ಧಿ ಕಾರ್ಯಕ್ರಮಗಳು
17. ಆಯುಷ್ಮಾನ್ ಭಾರತ್ ಯೋಜನೆ
18. ಜಲಸಿರಿ ಕಾರ್ಯಕ್ರಮ
19. ನಗರ ಪರಿವರ್ತನೆಗಾಗಿ ಅಟಲ್ ಮಿಷನ್
20. ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮ
21. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

**ಇತರೆ ಯೋಜನೆಗಳು**

22. ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ESCOM)
23. ನಗರೀಕರಣ–ಬೆಂಗಳೂರು ನಗರಕ್ಕೆ ಸುಸ್ಥಿರ ಪರಿಹಾರಗಳು

## ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಪ್ರಸ್ತುತ ಪ್ರಗತಿಯಲ್ಲಿರುವ ಮೌಲ್ಯಮಾಪನ ಅಧ್ಯಯನಗಳು

| ಕ್ರಮ ಸಂಖ್ಯೆ | ಇಲಾಖೆ | ಅಧ್ಯಯನದ ಹೆಸರು |
|---|---|---|
| 1. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆ.ಆರ್.ಐ.ಡಿ.ಎಲ್.) 2014–15 ರಿಂದ 2019–20 ರವರೆಗೆ ಮೌಲ್ಯಮಾಪನ |
| 2. | ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ | ಕರ್ನಾಟಕದಲ್ಲಿ ತಂತ್ರಜ್ಞಾನದ ನೆರವಿನ ಕಲಿಕೆ ಕಾರ್ಯಕ್ರಮದ (TALP) ಅನುಷ್ಠಾನ ಪ್ರಕ್ರಿಯೆಗಳು ಮತ್ತು ಸಾಧನೆಯ ಏಕಕಾಲಿಕ ಮೌಲ್ಯಮಾಪನ |
| 3. | ಸಮಾಜ ಕಲ್ಯಾಣ ಇಲಾಖೆ | ಸುಸ್ಥಿರ ಅಭಿವೃದ್ಧಿ ಗುರಿ 4 ಮತ್ತು 10 ರ ಅಡಿಯಲ್ಲಿ ಗುರಿಗಳನ್ನು ಸಾಧಿಸಲು ಕರ್ನಾಟಕದಲ್ಲಿ (2014–15 ರಿಂದ 2018–19) ದಾಖಲಾತಿ, ಪರಿವರ್ತನೆ ಮತ್ತು ಕಲಿಕೆಯ ಫಲಿತಾಂಶಗಳ ಮೇಲೆ ಎಸ್‌ಸಿ/ಎಸ್‌ಟಿ/ಒಬಿಸಿ ವಿದ್ಯಾರ್ಥಿಗಳಿಗೆ ಸರ್ಕಾರಿ ಹಾಸ್ಟೆಲ್‌ಗಳ ಪ್ರಭಾವದ ಮೌಲ್ಯಮಾಪನ |
| 4. | ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ | 2013–14 ರಿಂದ 2018–19 ರಿಂದ 'ಅನ್ನ ಭಾಗ್ಯ' ಯೋಜನೆಯ ಕಾರ್ಯನಿರ್ವಹಣೆಯ ಮೌಲ್ಯಮಾಪನ ಮತ್ತು ಆಹಾರ ಭದ್ರತೆಯ ಮೇಲೆ ಅದರ ಪ್ರಭಾವ ಮತ್ತು ಕರ್ನಾಟಕ ರಾಜ್ಯದಲ್ಲಿ ಶೂನ್ಯ ಹಸಿವಿನ ಸುಸ್ಥಿರ ಅಭಿವೃದ್ಧಿ ಗುರಿ –2 ಅನ್ನು ಸಾಧಿಸುವುದು |
| 5a &b | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸಾಂಸ್ಥಿಕ ವ್ಯವಸ್ಥೆಗಳ ಕಾರ್ಯನಿರ್ವಹಣೆಯ ಮೌಲ್ಯಮಾಪನ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರ ಪುನರ್ವಸತಿ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯವನ್ನು ನಿವಾರಿಸುವಲ್ಲಿ ಅದರ ಪ್ರಭಾವ<br>ಮತ್ತು<br>ಕರ್ನಾಟಕದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ 2006ರ ಅನುಷ್ಠಾನದ ಮೌಲ್ಯಮಾಪನ |
| 6. | ಸಾರ್ವಜನಿಕ ಉದ್ದಿಮೆಗಳ ಇಲಾಖೆ ಮತ್ತು ಜಂಗಲ್ ಲಾಡ್ಜಸ್ & ರೆಸಾರ್ಟ್ಸ್ ಲಿಮಿಟೆಡ್. | 2015–16 ರಿಂದ 2019–20 ರವರೆಗೆ ಜಂಗಲ್ ಲಾಡ್ಜ್‌ಗಳು ಮತ್ತು ರೆಸಾರ್ಟ್‌ಗಳ ಮೌಲ್ಯಮಾಪನ |
| 7. | ಕರ್ನಾಟಕ ಅರಣ್ಯ ಇಲಾಖೆ ಮತ್ತು ಅರಣ್ಯ ನಿಗಮಗಳು | 2015–16 ರಿಂದ 2019–20 ರವರೆಗೆ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಕೈಗಾರಿಕಾ ನಿಗಮ ನಿಯಮಿತ ಅರಣ್ಯ ಮತ್ತು ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಮೌಲ್ಯಮಾಪನ |
| 8. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ನಿಗಮ | 2015–16 ರಿಂದ 2018–19 ರವರೆಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಲಾದ ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಿಗಳ ಮೇಲೆ ಕೇಂದ್ರೀಕರಿಸುವ ಮಹಿಳಾ ಉದ್ಯಮಿಗಳಿಗೆ ಬಡ್ಡಿ ಸಹಾಯಧನದ ಮೌಲ್ಯಮಾಪನ |
| 9. | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (RDWSD) ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (RDPR) | ಕರ್ನಾಟಕದಲ್ಲಿ 2015–16 ರಿಂದ 2019–20 ರವರೆಗೆ ಬಹು–ಗ್ರಾಮ ನೀರು ಸರಬರಾಜು ಯೋಜನೆಯ ಕಾರ್ಯನಿರ್ವಹಣೆಯ ಮೌಲ್ಯಮಾಪನ |

| ಕ್ರಮ ಸಂಖ್ಯೆ | ಇಲಾಖೆ | ಅಧ್ಯಯನದ ಹೆಸರು |
|---|---|---|
| 10. | ಜಲಾನಯನ ಅಭಿವೃದ್ಧಿ ಇಲಾಖೆ | 2014–15 ರಿಂದ 2019–20 ರವರೆಗೆ ಕರ್ನಾಟಕದಲ್ಲಿ ಸುಸ್ಥಿರ ಕೃಷಿಗಾಗಿ ರಾಷ್ಟ್ರೀಯ ಮಿಷನ್ – ಮಳೆಯಾಧಾರಿತ ಪ್ರದೇಶ ಅಭಿವೃದ್ಧಿ (NMSA–RAD) ಮೌಲ್ಯಮಾಪನ |
| 11. | ಕೃಷಿ ಇಲಾಖೆ | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಫಲಾನುಭವಿ ಯೋಜನೆಗಳ ಮೌಲ್ಯಮಾಪನ 2015–16 ರಿಂದ 2019–20 |
| 12. | | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮೂಲಸೌಕರ್ಯ ಯೋಜನೆಗಳ ಮೌಲ್ಯಮಾಪನ 2015–16 ರಿಂದ 2019–20 |
| 13. | ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿ | ಕರ್ನಾಟಕ ರಾಜ್ಯ ಜೈವಿಕ ಇಂಧನ ಸಂಶೋಧನಾ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕೇಂದ್ರಗಳ ಕಾರ್ಯನಿರ್ವಹಣೆಯ ಮೌಲ್ಯಮಾಪನ ಮತ್ತು ಜೈವಿಕ ಇಂಧನ ಚಟುವಟಿಕೆಗಳ ಮಾಹಿತಿ ಮತ್ತು ಹರಡುವಿಕೆ, ಶಕ್ತಿಯ ವೆಚ್ಚ ಉಳಿತಾಯ ಮತ್ತು ಇಂಧನ ಭದ್ರತೆಯ ವಿಷಯದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿ–13 ರ ಸಾಧನೆಯ ಮೇಲೆ ಪರಿಣಾಮ. |
| 14. | ವಿವಿಧ ಇಲಾಖೆಗಳು | ಕರ್ನಾಟಕದಲ್ಲಿ 2013 – 14 ರಿಂದ 2020 – 21 ರವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿದ ಶುದ್ಧ ಕುಡಿಯುವ ನೀರಿನ ಘಟಕಗಳ ಮೌಲ್ಯಮಾಪನ ಕುರಿತು |

**ಗುಣಮಟ್ಟದ ಮಧ್ಯಸ್ಥಿಕೆಗಳು**

- ಮೌಲ್ಯಮಾಪನ ಅಧ್ಯಯನಗಳ ಉಪಯುಕ್ತತೆಯನ್ನು ಹೆಚ್ಚಿಸಲು ಮತ್ತು ಸರ್ಕಾರದ ಪುರಾವೆ ಆಧಾರಿತ ನೀತಿ ತಯಾರಿಕೆಗೆ ಉಪಕ್ರಮಗಳನ್ನು ಬೆಂಬಲಿಸಲು, ದೃಢವಾದ ವಿಧಾನ ಮತ್ತು ವಾಸ್ತವತೆಗಳ ಆಧಾರದ ಮೇಲೆ ಗುಣಮಟ್ಟದ ಮೌಲ್ಯಮಾಪನ ವರದಿಗಳನ್ನು ತಯಾರಿಸುವುದು ಅತ್ಯಗತ್ಯವಾಗಿರುತ್ತದೆ. ಗುಣಮಟ್ಟದ ಮೌಲ್ಯಮಾಪನವನ್ನು ಉತ್ತೇಜಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಅನೇಕ ಕ್ರಮಗಳನ್ನು ಕೈಗೊಂಡಿದೆ. ಪ್ರಮುಖ ಕ್ರಮಗಳನ್ನು ಕೆಳಗೆ ಪ್ರಸ್ತುತ ಪಡಿಸಲಾಗಿದೆ.
- ಪ್ರಾಧಿಕಾರದ ಆಡಳಿತ ಮಂಡಳಿಯನ್ನು ಮೌಲ್ಯಮಾಪನ ತಜ್ಞರನ್ನು ಸೇರ್ಪಡಿಸಿ ಪುನರ್ ರಚಿಸಲಾಗಿರುತ್ತದೆ ಮತ್ತು ತಾಂತ್ರಿಕ ಸಮಿತಿಯನ್ನು ವಿವಿಧ ಕ್ಷೇತ್ರಗಳ ತಜ್ಞರನ್ನು ಸೇರ್ಪಡಿಸಿ ಪುನರ್ ರಚಿಸಲಾಗಿರುತ್ತದೆ
- ಯೋಜನೆ/ಮಧ್ಯಸ್ಥಿಕೆಗಳ ಪರಿಣಾಮಗಳ ಎಲ್ಲಾ ಆಯಾಮಗಳನ್ನು ಸೇರಿಸಲು ಉಲ್ಲೇಖ ನಿಯಮಗಳನ್ನು ವಿನ್ಯಾಸಗೊಳಿಸಲು, ದತ್ತಾಂಶ ಹಂಚಿಕೆ ಮತ್ತು ವಿವಿಧ ಹಂತಗಳಲ್ಲಿ ಸಲಹೆಗಳಿಗಾಗಿ ಮತ್ತು ಸಮಗ್ರ ಉಲ್ಲೇಖ ನಿಯಮಗಳಿಗಾಗಿ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಲಾಗಿರುತ್ತದೆ.
- ಪಾರದರ್ಶಕತೆಯನ್ನು ಹೆಚ್ಚಿಸಲು ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ ವಿಧಾನವನ್ನು ಹೆಚ್ಚು ವೈಜ್ಞಾನಿಕ ಮತ್ತು ಪರಿಮಾಣಾತ್ಮಕ ಕ್ರಮದಲ್ಲಿ ಅನ್ವಯಿಸಲಾಗಿರುತ್ತದೆ. ವಾಸ್ತವಿಕ ಕ್ಷೇತ್ರ ದತ್ತಾಂಶದ ಆಧಾರದ ಮೇಲೆ ಉತ್ತಮ ಗುಣಮಟ್ಟದ ವರದಿಯನ್ನು ಪಡೆಯಲು ಪರಿಣಿತ ಸಲಹೆಗಾರ ಸಂಘಟನೆಯನ್ನು ಪಡೆಯಲು ವಿನಂತಿಯ ಪ್ರಸ್ತಾಪ ದಾಖಲೆಯನ್ನು ನಿಯಮಿತವಾಗಿ ನವೀಕರಿಸಲಾಗಿರುತ್ತದೆ.

- ಅಧ್ಯಯನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಮತ್ತು ತಜ್ಞರ ಸಲಹೆಗಳನ್ನು ನೀಡಲು ಪ್ರತಿ ತಿಂಗಳು ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.
- ಕರಡು ಮೌಲ್ಯಮಾಪನ ವರದಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿರುವ ತಂಡ ಮತ್ತು ಸ್ವತಂತ್ರ ಮೌಲ್ಯಮಾಪಕ/ವಿಷಯ ತಜ್ಞರಿಂದ ಪರಿಶೀಲಿಸಲಾಗುತ್ತದೆ. ಇಲಾಖೆಯ ಅಭಿಪ್ರಾಯ/ಸಲಹೆಗಳಿಗಾಗಿ ಇದನ್ನು ಇಲಾಖೆಗೆ ಕಳುಹಿಸಲಾಗುತ್ತದೆ. ಎಲ್ಲರೂ ನೀಡಿದ ಅಭಿಪ್ರಾಯ/ಸಲಹೆಗಳ ಆಧಾರದ ಮೇಲೆ ವರದಿಯನ್ನು ಪರಿಷ್ಕರಿಸಲಾಗುತ್ತದೆ. ಅದರ ಅನುಮೋದನೆ/ಪರಿಷ್ಕರಣೆಗೆ ಸಂಬಂಧಿಸಿದಂತೆ ಅಂತಿಮ ತೀರ್ಮಾನಕ್ಕಾಗಿ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಲಾಗುತ್ತದೆ. ಎಲ್ಲಾ ಪರಿಷ್ಕರಣೆಗಳನ್ನು ನಡೆಸಿದ ನಂತರ, ವರದಿಯನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಪರಿಶೀಲಿಸುತ್ತದೆ ಮತ್ತು ಅದನ್ನು ಅನುಮೋದಿಸಲಾಗುತ್ತದೆ.
- ಅಧ್ಯಯನ ವರದಿಗಳಲ್ಲಿ ಮಾಡಿದ ಶಿಫಾರಸ್ಸುಗಳ ಮೇಲೆ ಕ್ರಮ ಕೈಗೊಂಡ ವರದಿಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯು ಪರಿಶೀಲಿಸುತ್ತದೆ.

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ (2020–21) ನಡೆಸಿದ ಅಧ್ಯಯನಗಳಲ್ಲಿ ನೀತಿ ಬದಲಾವಣೆಗಳ ಮೇಲೆ ಪರಿಣಾಮ ಬೀರುವ ಕೆಲವು ಪ್ರಮುಖ ಅಧ್ಯಯನಗಳು:**

| ಕ್ರ ಸಂ | ಇಲಾಖೆ | ಯೋಜನಾ ಶೀರ್ಷಿಕೆ | ಶಿಫಾರಸ್ಸುಗಳು |
|---|---|---|---|
| 1 | **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ** ಮತ್ತು **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** | ಕರ್ನಾಟಕದಲ್ಲಿ 2014–2015 ರಿಂದ 2016–2017ರ ಅವಧಿಯವರೆಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಮೌಲ್ಯಮಾಪನ | • ಯೋಜನೆಯನ್ನು ಮರುವಿನ್ಯಾಸಗೊಳಿಸುವುದು ಮತ್ತು ಪರಿಷ್ಕೃತ ವಿಷಯದೊಂದಿಗೆ ವಿಸ್ತರಿಸುವುದು ಅಥವಾ ಅಸ್ತಿತ್ವದಲ್ಲಿರುವ ದೀನ ದಯಾಳು ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಅಥವಾ ಇತರ ಯಾವುದೇ ಕೌಶಲ್ಯ ಕಾರ್ಯಕ್ರಮದೊಂದಿಗೆ ವಿಲೀನಗೊಳಿಸುವುದು.<br>• ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಿಂದ ಅನೇಕ ಸರ್ಕಾರಿ ಇಲಾಖೆಗಳು (ಉದಾಹರಣೆಗೆ, ಸಮಾಜ ಕಲ್ಯಾಣ, ಕೌಶಲ್ಯ ಮತ್ತು ಜೀವನೋಪಾಯ ಇಲಾಖೆ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮ) ಸ್ವಯಂ ಉದ್ಯೋಗಾವಕಾಶಗಳಿಗಾಗಿ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು, ನಿಯೋಜನೆ ಮತ್ತು ಸಾಲಗಳನ್ನು ನೀಡುತ್ತವೆ ಮತ್ತು ಪ್ರಯೋಜನಗಳ ಪುನರಾವರ್ತನೆ ತಡೆಗಟ್ಟಲು ಒಂದೇ ಇಲಾಖೆಯ ಅಡಿಯಲ್ಲಿ ತರಬೇಕಾಗಿದೆ.<br>• ಯೋಜನೆಯ ಎರಡೂ ಘಟಕಗಳಲ್ಲಿ ಪ್ರವೇಶ ಮಟ್ಟದ ಅರ್ಹತೆಯನ್ನು ಪರಿಶೀಲಿಸಬೇಕಾಗಿದೆ. ಕನಿಷ್ಠ ಪ್ರವೇಶ ಮಟ್ಟದ ವಯಸ್ಸನ್ನು 21 ವರ್ಷಗಳನ್ನಾಗಿ ಮಾಡಲು ಪರಿಷ್ಕರಿಸಬೇಕು.<br>• ವಿಕಲಚೇತನರು ಹಾಗೂ ಮಂಗಳಮುಖಿಯರಿಗೆ ಅರ್ಹತಾ ಮಾನದಂಡವನ್ನು ಸಡಿಲಿಸಬೇಕಾಗಿದೆ ಮತ್ತು ಅವರ ಆಯ್ಕೆಯ ಸ್ಥಳದಿಂದ ಪ್ರಯೋಜನವನ್ನು ಪಡೆಯಲು ಅವರಿಗೆ ಅವಕಾಶ ನೀಡಬೇಕು. |
| 2 | ಕರ್ನಾಟಕ ರಾಜ್ಯ ಗ್ರಾಮೀಣ | ಕರ್ನಾಟಕ ರಾಜ್ಯ ಗ್ರಾಮೀಣ | • ಸ್ವ ಸಹಾಯ ಗುಂಪುಗಳ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಲು ಜಿಲ್ಲೆ/ ತಾಲ್ಲೂಕಿನಲ್ಲಿ ಮೀಸಲಿಡಬೇಕಾದ |

| ಕ್ರ ಸಂ | ಇಲಾಖೆ | ಯೋಜನಾ ಶೀರ್ಷಿಕೆ | ಶಿಫಾರಸ್ಸುಗಳು |
|---|---|---|---|
| | ಜೀವನೋಪಾಯ ಮಿಷನ್<br><br>ಮತ್ತು<br><br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಜೀವನೋಪಾಯ ಅಭಿಯಾನದ ಅಡಿಯಲ್ಲಿ ಸ್ವ ಸಹಾಯ ಗುಂಪುಗಳ ಸ್ಥಿತಿಯ ಅಧ್ಯಯನ | ಸ್ಥಳಕ್ಕಾಗಿ ಶೆಡ್‌ಗಳನ್ನು ಒದಗಿಸಲು ಕರ್ನಾಟಕ ರಾಜ್ಯ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯೊಂದಿಗೆ ಕೈಗಾರಿಕಾ ಪ್ರದೇಶಗಳಲ್ಲಿ ಕಾಮಗಾರಿ ಕೈಗೊಳ್ಳಲು ಸಹಕರಿಸಬೇಕು.**<br>• ಮಹಿಳಾ ಉದ್ದೇಶಿತ ಆಯವ್ಯಯದ ಅಡಿಯಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಸಹ **ಮಹಿಳಾ ಉದ್ಯಮಿಗಳ ಮೂಲಸೌಕರ್ಯಕ್ಕಾಗಿ** ಹಣವನ್ನು ಒದಗಿಸಬೇಕು.<br>• **ಗುಡಿ ಕೈಗಾರಿಕೆಗಳಲ್ಲಿ ತರಬೇತಿ** ನೀಡುವುದು ಮತ್ತು ಏಷಿಯನ್ ಪೇಂಟ್ಸ್ ಕಲರ್ ಅಕಾಡೆಮಿಯಂತೆಯೇ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರನ್ನು ಗುರುತಿಸಿ ಸೂಕ್ತ ತರಬೇತಿ ನೀಡುವುದು.<br>• **ಕೃಷಿ ಮತ್ತು ಹೈನುಗಾರಿಕೆ ಉತ್ಪನ್ನಗಳಿಗಾಗಿ ಅಮೆಜಾನ್, ಫ್ಲಿಪ್‌ಕಾರ್ಟ್, ಬಿಗ್ ಬಜಾರ್, ಬಿಗ್ ಬಾಸ್ಕೆಟ್ ಮತ್ತು ರಿಲಯನ್ಸ್** ಜೊತೆ ಒಪ್ಪಂದ ಮಾಡಿಕೊಳ್ಳಬೇಕು.<br>• **ಜಿಲ್ಲಾ ಮಟ್ಟದಲ್ಲಿ ಲಿಂಗ ಪ್ರಯೋಗಾಲಯ (Gender Lab)** ವು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಸಮಾಜ ಕಲ್ಯಾಣ ಮಂಡಳಿಯು ನೆಟ್‌ವರ್ಕಿಂಗ್ ಮೂಲಕ ಸ್ಥಾಪಿಸುವುದು |
| 3 | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಾರ್ಮಿಕ ಇಲಾಖೆ | ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಉಪಕರ (ಸೆಸ್) ಬಳಕೆಯ ಕ್ಷೇಮಾಭ್ಯುದಯ ಪರಿಣಾಮದ ಅಧ್ಯಯನ | • ಇದುವರೆಗೆ ಸಂಗ್ರಹಿಸಿದ ಸೆಸ್‌ನಲ್ಲಿ ಕೇವಲ ಶೇ.6.25% ಮಾತ್ರ ಮಂಡಳಿಯಿಂದ ಖರ್ಚಾಗಿದೆ. ಆದುದರಿಂದ ಉದ್ಯೋಗ ಆರೋಗ್ಯ. ಶಿಕ್ಷಣ ಮತ್ತು ಸುರಕ್ಷತೆಗಾಗಿ ಸೆಸ್ ವಿನಿಯೋಗಿಸದ ನಿಧಿಯ ಪರಿಣಾಮಕಾರಿ ಬಳಕೆ,<br>• ಕಾರ್ಮಿಕರ ಕೌಶಲ್ಯ ಮತ್ತು ಮರುಕೌಶಲ್ಯ ಮಹಿಳಾ ಕಟ್ಟಡ ಕಾರ್ಮಿಕರನ್ನು ನೋಂದಾಯಿಸಲು ವಿಶೇಷ ಆಂದೋಲನ ಮತ್ತು ಪ್ರತ್ಯೇಕ ಶೌಚಾಲಯಗಳು, ಅವರ ಮಕ್ಕಳಿಗೆ ಕ್ರೀಡೆ ಹಾಗೂ ಕಾರ್ಮಿಕರ, ನೋಂದಣಿ ಸುಧಾರಿಸಲು ಐಇಸಿ ಅಭಿಯಾನವನ್ನು ನಡೆಸುವುದನ್ನು ಯೋಜನೆಯ ಮಾರ್ಗಸೂಚಿಯಲ್ಲಿ ಕಡ್ಡಾಯಗೊಳಿಸುವುದು.<br>• ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಸಂಬಂಧಿತ ಪ್ರಯೋಜನಗಳನ್ನು ಚಾಲನೆ ಮಾಡಲು ಇಲಾಖೆಗಳ ಹೊಂದಾಣಿಕೆ.<br>• **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ನಾಗರೀಕ ಸಮಾಜ ಸಂಸ್ಥೆಗಳು ಹಾಗೂ ಅಂತರಾಷ್ಟ್ರೀಯ ವಲಸೆ ಕೇಂದ್ರದಿಂದ SDEL ಇಲಾಖೆಯೊಂದಿಗೆ** ಸಂಯೋಜಿಸಿ **ಇಲಾಖೆ**ಯಿಂದ (ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ) ನೋಂದಣಿ ಅರ್ಜಿ ಮತ್ತು ಸಹಾಯ ಮತ್ತು ಸ್ಮಾರ್ಟ್ ಕಾರ್ಡ್ ವಿತರಿಸುವುದು. |

| ಕ್ರ ಸಂ | ಇಲಾಖೆ | ಯೋಜನಾ ಶೀರ್ಷಿಕೆ | ಶಿಫಾರಸ್ಸುಗಳು |
|---|---|---|---|
| 4 | ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ (KSRTC, NWKRTC & NEKRTC) 2014–15 ರಿಂದ 2019–20 ರವರೆಗೆ ಮೌಲ್ಯಮಾಪನ | • ರಸ್ತೆ ಸಾರಿಗೆ ನಿಗಮಗಳು ತಮ್ಮ ಬಂಡವಾಳ ಸ್ಥಿತಿಯನ್ನು ಸುಧಾರಿಸಲು **ಆಸ್ತಿಗಳ ಆದಾಯ**ವನ್ನು ಶಾಪಿಂಗ್ ಮಾಲ್‌ಗಳು, ಪಾರ್ಕಿಂಗ್, ಫುಡ್‌ಕೋರ್ಟ್ಸ್‌ಗಳನ್ನು ಸ್ಥಾಪಿಸಲು ಉಪಯೋಗಿಸಬೇಕು.<br>• ಸರ್ಕಾರವು ಸಾರಿಗೆ ಬಸ್ಸುಗಳ **ರಿಯಾಯಿತಿ ನೇರವಾಗಿ ಫಲಾನುಭವಿಗಳ ಖಾತೆಗೆ (DBT) ವರ್ಗಾಯಿಸುವುದು** ಗ್ರಾಹಕರು ಸಾರಿಗೆ ನಿಗಮಗಳಿಗೆ ಪೂರ್ಣ ದರವು ಪಾವತಿಸುವುದು. |
| 5 | ತೋಟಗಾರಿಕೆ ಇಲಾಖೆ | ಕರ್ನಾಟಕದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ (NHM) ಮೌಲ್ಯಮಾಪನ | • ಹಲವಾರು ಯೋಜನೆಗಳಲ್ಲಿ NHM **ಯೋಜನೆಗಳ ಸಂಯೊಜನೆ:**<br>ತೋಟಗಾರಿಕೆಯ ಸಮಗ್ರ ಅಭಿವೃದ್ಧಿಗಾಗಿ ಮಿಷನ್ ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ನ ಯೋಜನೆಗಳು ಕ್ರೋಢೀಕರಿಸಬಹುದು. RKVY, NMSA, NMOOP, PMKSY ಸಾವಯುವ ಭಾಗ್ಯ ಯೋಜನೆ ರಾಷ್ಟ್ರೀಯ ಜೇನುನೊಣ ಮಂಡಳಿ (NBB) ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಗೇರು ಅಭಿವೃದ್ಧಿ ನಿಗಮ, ಮಾವು ಅಭಿವೃದ್ಧಿ ಮತ್ತು ಮಾರ್ಕೆಟಿಂಗ್ ಕಾರ್ಪೊರೇಷನ್ ಲಿಮಿಟೆಡ್, ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿ ರಿಸರ್ಚ್ ಮುಂತಾದ ಇಲಾಖೆಗಳೊಂದಿಗೆ ಜೊತೆಗೂಡಿಸುವುದು.<br>• ಒಟ್ಟು ಬಜೆಟ್‌ದಲ್ಲಿ ವಿವಿಧ ಅಂಶಗಳಿಗೆ **ಜಿಲ್ಲಾವಾರು ಬೇಡಿಕೆಗೆ** ಅನುಗುಣವಾಗಿ ಗುರಿಗಳನ್ನು ಗುರುತಿಸಿ ಅನುದಾನ ನೀಡುವುದು. ಸಣ್ಣ ಹಾಗೂ ಅತೀ ಸಣ್ಣ ರೈತರಿಗೆ ಅನುಕೂಲವಾಗುವಂತೆ ವಿವಿಧ **ಸಹಾಯಧನ** ನೀಡಬೇಕು ಹಾಗೂ **ಘಟಕ ವೆಚ್ಚವನ್ನು ಸಹ ಹೆಚ್ಚಿಸಬೇಕು.** |
| 6 | **ಒಳಾಡಳಿತ ಇಲಾಖೆ** | **ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮದ ಮೌಲ್ಯಮಾಪನ** | • Paid up share ಬಂಡವಾಳವನ್ನು ಹೆಚ್ಚಿಸುವುದು. ಇದಕ್ಕೆ ಸಂಬಂಧಿಸಿದಂತೆ, Reserve Fund ದ ಮೂಲಕ Bonus shares ಹಾಗೂ ಮಾರುಕಟ್ಟೆಯಲ್ಲಿ ಬಂಡವಾಳ ಶೇಖರಿಸಬೇಕು.<br>• ನಿಗಮದ ಸುಸ್ಥಿರ ಬೆಳಣಿಗೆಗಾಗಿ K–RERA ಅಡಿಯಲ್ಲಿ ನಿಗಮದ ಚಟುವಟಿಕೆಗಳು ನೋಂದಾಯಿಸಬೇಕು.<br>• ಆಂತರಿಕ ಆಡಿಟ್ ಪದ್ಧತಿಯನ್ನು ಸುಧಾರಿಸಬೇಕು, ಈ ಮೂಲಕ **AG ನಿರೀಕ್ಷಣೆಗಳಿಗೆ ಹೊಂದಾಣಿಕೆ** ಮಾಡುವುದು. |
| 7 | ಸಹಕಾರ ಇಲಾಖೆ | ಸಹಕಾರ ಇಲಾಖೆಯಿಂದ ರಿಯಾಯಿತಿ ಬಡ್ಡಿ ದರದಲ್ಲಿ ಸ್ವಸಹಾಯ ಸಂಘಗಳಿಗೆ ನೀಡಿದ ಸಾಲದಿಂದ ಉದ್ಯೋಗ | • ಎಲ್ಲಾ ಸ್ವಸಹಾಯ ಗುಂಪುಗಳಿಗೆ **ಸಂಬಂಧಪಟ್ಟ ಆರ್ಥಿಕ ಸಹಾಯದ ಯೋಜನೆಗಳು NULM ಅಡಿಯಲ್ಲಿ ತರಬೇಕು.** |

| ಕ್ರ ಸಂ | ಇಲಾಖೆ | ಯೋಜನಾ ಶೀರ್ಷಿಕೆ | ಶಿಫಾರಸ್ಸುಗಳು |
|---|---|---|---|
| | | ಹಾಗೂ ಆದಾಯದ ಮೇಲೆ ಸುಸ್ಥಿರ ಅಭಿವೃದ್ಧಿ ಗುರಿ–5ಕ್ಕೆ ಸಂಬಂಧಿಸಿದಂತೆ ಪರಿಣಾಮದ ಮೌಲ್ಯಮಾಪನ | • ಬ್ಯಾಂಕುಗಳು ಸ್ವಸಹಾಯ ಸಂಘಗಳಿಗೆ ಅನುಕೂಲವಾಗುವಂತೆ ಸಹಾಯವಾಣಿ ಅಥವಾ Councelling Centres ಗಳು ಸ್ಥಾಪಿಸಬೇಕು Business Correspondent ರವರಿಗೆ ಗುರುತಿಸಿ ಸಹಾಯ ನೀಡಬೇಕು. |
| 8 | ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ | **ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆಯಡಿಯಲ್ಲಿ–ಪ್ರತಿ ಹನಿಗೆ ಹೆಚ್ಚು ಬೆಳೆಯ ಭಾಗವಾದ, ಸೂಕ್ಷ್ಮ ನೀರಾವರಿ ಪ್ರದೇಶದ ವ್ಯಾಪ್ತಿ, ಸೂಕ್ತವಾದ ಬೆಳೆ ಮಾದರಿಯ ಪ್ರೋತ್ಸಾಹ, ಬೆಳೆಯ ಉತ್ಪಾದಕತೆ, ವೆಚ್ಚ ಉಳಿತಾಯ ಮತ್ತು ಸಮರ್ಥ ನೀರಿನ ಬಳಕೆಯ ಮೂಲಕ ಸುಸ್ಥಿರ ಅಭಿವೃದ್ಧಿ ಗುರಿಗಳು–6ರ ಸಾಧನೆಯ ಪರಿಣಾಮದ ಮೌಲ್ಯಮಾಪನ (2016–17 ರಿಂದ 2018–2019)** | • ಸಹಾಯ ಧನದ ಯೋಜನೆಯ ರೈತರಿಂದ ಪಡೆದ **ನವೀನ ತಾಂತ್ರಿಕತೆಗೆ ಅನುಗುಣವಾಗಿ ವಿನ್ಯಾಸಗೊಳಿಸಬೇಕು** ಹಾಗೂ ಸಣ್ಣ ರೈತರಿಗೆ ಸಮಗ್ರ ರೀತಿಯಲ್ಲಿ ವಿವಿಧ ಅಂಶಗಳು – ಭಾವಿಯಿಂದ ಪಂಪ್‌ಸೆಟ್ ಗಳಿಗೆ ವಿದ್ಯುತ್‌ದವರೆಗೆ ಕ್ರೋಢೀಕರಿಸುವ ಮಾದರಿಯಲ್ಲಿ ಯೋಜನೆಯ ಅನುಷ್ಠಾನ ಮರುವಿನ್ಯಾಸಗೊಳಿಸಬೇಕು ಹಾಗೂ ಸಣ್ಣ ರೈತರಿಗೆ ವಿವಿಧ ಅಂಶಗಳನ್ನು ಸಂಯೋಜಿಸಲು ಅನುವು ಮಾಡಿಕೊಡುವ ರೀತಿಯಲ್ಲಿ ಯೋಜನೆಯನ್ನು ಮರು ವಿನ್ಯಾಸಗೊಳಿಸಬೇಕು.<br>• ಯೋಜನೆಯಲ್ಲಿ ಪಾರದರ್ಶಕತೆ ಹೆಚ್ಚಿಸಲು ಯೋಜನೆಯ ಎಲ್ಲಾ ಪ್ರಕ್ರಿಯೆಗಳಲ್ಲಿ **ತಾಂತ್ರಿಕತೆ ಅಳವಡಿಸಬೇಕು ಹಾಗೂ ನೇರ ಹಣ ವರ್ಗಾವಣೆಯ ಪದ್ಧತಿಯನ್ನು** ವೈಜ್ಞಾನಿಕವಾಗಿ ಸಂಯೋಜಿಸಬೇಕು. ಏಕಗವಾಕ್ಷಿ ಪದ್ಧತಿಯನ್ನು ಅಳವಡಿಸಬೇಕು.<br>• ಎಲ್ಲಾ ಫಲಾನುಭವಿಗಳಿಗೆ **ವಿಮೆ** ಕಡ್ಡಾಯಗೊಳಿಸಬೇಕು.<br>• ಯೋಜನೆಯ **ಪಿಪಿಪಿ ಮಾದರಿ ಹಾಗೂ ಸಿಎಸ್‌ಆರ್ ಮಾದರಿಯಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯೊಂದಿಗೆ** ಸಂಯೋಜನೆಯ ಮೂಲಕ ಬೆಳೆಸಲು ನವೀನವಾಗಿ ವಿನ್ಯಾಸಗೊಳಿಸಬೇಕು. |
| 9 | ಕರ್ನಾಟಕ ಉದ್ಯೋಗ ಮಿತ್ರ | ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳಿಗೆ ಹೂಡಿಕೆದಾರಸ್ನೇಹಿ ವ್ಯಾಪಾರ ಪರಿಸರ ಪ್ರೋತ್ಸಾಹಿಸಲು ಸರ್ಕಾರದ ಪ್ರಮುಖ ಇಲಾಖೆಗಳ ಕೈಗಾರಿಕೆ ಸಂಬಂಧಿತ ಸೇವಾ ಮಾಡ್ಯೂಲ್‌ಗಳ ಕಾರ್ಯವೈಖರಿ ಹಾಗೂ ಪರಿಣಾಮಕಾರಿತ್ವದ ಮೌಲ್ಯಮಾಪನ, 2019–20 | • ಚಾಲ್ತಿಯಲ್ಲಿರುವ ಹೂಡಿಕೆದಾರ ನಿಯಮಗಳನ್ನು ಇನ್ನಷ್ಟು ಸುಧಾರಿಸುವುದು<br>• **ರಾಜ್ಯ ಏಕಗವಾಕ್ಷಿ ಪೋರ್ಟಲ್ ಕಾರ್ಯಾಚರಣೆಯನ್ನು ಉತ್ತಮಗೊಳಿಸುವುದು. NeSDA** ಮೌಲ್ಯಮಾಪನ ನಿಯತಾಂಕಕ್ಕೆ ಇಲಾಖೆಯ ಪೋರ್ಟಲ್‌ಗಳ ಬಳಸುವಿಕೆ ಮತ್ತು ಉಪಯುಕ್ತತೆಯನ್ನು ಹೆಚ್ಚಿಸುವುದು.<br>• **ಕೈಗಾರಿಕಾ ಭೂ ಹಂಚಿಕೆ ಮತ್ತು ಎಂಎಸ್‌ಎಂಇಗಳಿಗೆ ಸರ್ಕಾರ Land Bank ಯೋಜನೆಯ ಮೂಲಕ ಬೆಂಬಲಿಸುವುದು.**<br>• ತಡೆರಹಿತ ಉದ್ಯಮ ಸೇವೆಗಳನ್ನು ಒದಗಿಸಲು KUM ಇಬಿಜ್ ಕರ್ನಾಟಕ ಪೋರ್ಟಲ್ ಸುಧಾರಣೆಗೆ ತಕ್ಷಣದ ಕ್ರಿಯಾಶೀಲ ವಿಶೇಷ ವ್ಯವಸ್ಥೆಯನ್ನು ಅಳವಡಿಸಬೇಕು.<br>• ಬಳಕೆದಾರರ two–factor authentication ಮೂಲಕ ಭದ್ರತಾ ಕ್ರಮಗಳನ್ನು ಬಲಪಡಿಸುವುದು. |

| ಕ್ರ ಸಂ | ಇಲಾಖೆ | ಯೋಜನಾ ಶೀರ್ಷಿಕೆ | ಶಿಫಾರಸ್ಸುಗಳು |
|---|---|---|---|
| | | | • ಅರ್ಜಿ ಪ್ರಕ್ರಿಯೆಯ ಬಗ್ಗೆ ಆನ್‌ಲೈನ್ ಮೂಲಕ ಮಾರ್ಗದರ್ಶಿಕೆ ಹಾಗೂ ಕಚೇರಿಗಳಲ್ಲಿ ಭೌತಿಕ ಹೆಲ್ಪ್ ಡೆಸ್ಕ್ ಮೂಲಕ ಮುಖ್ಯವಾಗಿ ಗುರುತಿಸಲಾದ ಸಮಸ್ಯೆಗಳನ್ನು ನಿವಾರಿಸಬಹುದು.<br>• ಹರಿಯಾಣ ರಾಜ್ಯದ ಪೋರ್ಟಲ್‌ನಲ್ಲಿರುವ ವಿಶೇಷ ವ್ಯವಸ್ಥೆಗಳನ್ನು ಅನುಕರಿಸಬಹುದಾಗಿದ್ದು, ಗೋವಾ ರಾಜ್ಯದ ಪೋರ್ಟಲ್‌ನ ಮಾಹಿತಿ ಭದ್ರತೆ ವಿಶೇಷ ವ್ಯವಸ್ಥೆಯನ್ನು ಅನುಸರಿಸಬಹುದು.<br>• **ಆನ್‌ಲೈನ್ ವ್ಯವಸ್ಥೆ ಹಾಗೂ ನೆರವೇರಿಕೆ ಪ್ರಕ್ರಿಯೆಗಳಲ್ಲಿ ಕೆಂಪುವರ್ಗದ ಕೈಗಾರಿಕೆಗಳಿಗೆ 45 ರಿಂದ 21 ದಿನಗಳು, ಕೇಸರಿ ವರ್ಗಕ್ಕೆ 21 ರಿಂದ 15 ದಿನಗಳಿಗೆ ಹಾಗೂ ಹಸಿರು ವರ್ಗದ ಉದ್ದಿಮೆಗಳಿಗೆ 15 ರಿಂದ 7 ದಿನಗಳಿಗೆ ಇಳಿಸುವ ಮೂಲಕ ಒಪ್ಪಿಗೆ ಪಡೆದುಕೊಳ್ಳುವ ಕಾಲಮಿತಿಯನ್ನು ಕಡಿಮೆ ಮಾಡಬೇಕು.**<br>• ಕಾರ್ಖಾನೆ ಕಟ್ಟಡ ನಕ್ಷೆಗಳ ಅನುಮೋದನೆಗಾಗಿ ಆಂಧ್ರ ಪ್ರದೇಶವು ಅಭಿವೃದ್ಧಿ ಪಡಿಸಿದ ವ್ಯವಸ್ಥೆಯನ್ನು ಹೋಲುವ ರೀತಿಯ ಕಟ್ಟಡ ನಕ್ಷೆಗಳ ಅನುಮೋದನೆಗೆ ಸ್ವಯಂಚಾಲಿತ ಗೊಳಿಸಬೇಕು.<br>• ವೆಬ್–ಪೋರ್ಟಲ್ ಅನ್ನು ಹೆಚ್ಚು ಬಳಕೆದಾರ ಸ್ನೇಹಿಯನ್ನಾಗಿ ರೂಪಿಸುವುದು. |
| 10 | ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆ | ಪಶುಭಾಗ್ಯ ಯೋಜನೆಯ ಮೌಲ್ಯಮಾಪನ | • ಪ್ರಸ್ತುತ ಸಮಿತಿಯ ಮೂಲಕ ಫಲಾನುಭವಿಗಳು ಗುರುತಿಸುವಿಕೆ ಹಾಗೂ ತಾಲ್ಲೂಕು ಮಟ್ಟದಲ್ಲಿ **ಅನುಷ್ಠಾನವನ್ನು ಮರುವಿನ್ಯಾಸಗೊಳಿಸಿ ಏಕಗವಾಕ್ಷಿ ಮೂಲಕ ಅನುಷ್ಠಾನಗೊಳಿಸಬೇಕು.**<br>• ಈ ಯೋಜನೆಯು ಇತರ ಇಲಾಖೆಗಳ ಯೋಜನೆಗಳ ಜೊತೆಗೆ ಸಂಯೋಜಿಸಬೇಕು (Convergence), **MGNREGA, RKVY (Cattleshed), Solar Mission ಜೊತೆಗೆ Poultry Renewable Energy (Biogas) ಹಾಗೂ ಗಣಿ ಪ್ರದೇಶಾಭಿವೃದ್ಧಿ ನಿಧಿಯ ಬಳಕೆ.**<br>• **ಫಲಾನುಭವಿಗಳಿಗೆ ಮಾರುಕಟ್ಟೆಗಾಗಿ FPO, SHG** ಗಳ **ಜೊತೆಗೆ ಹೊಂದಾಣಿಕೆ ಹಾಗೂ ಜಿಲ್ಲಾ ಮಟ್ಟದಲ್ಲಿ ಮೇವು ಬ್ಯಾಂಕ್** ಗಳ ಸ್ಥಾಪನೆ. |
| 11 | ಅರಣ್ಯ ಇಲಾಖೆ | ಮಾನವ ಆನೆ ಸಂಘರ್ಷದ ಮೌಲ್ಯಮಾಪನ ಅಧ್ಯಯನ– ಸಂಘರ್ಷವನ್ನು ತಗ್ಗಿಸುವಿಕೆಯ ವಿಧಾನಗಳು ಮತ್ತು | • **ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನೆ** ಒಳಗೊಂಡಿರುವ **ಬೆಳೆ ಹಾನಿಯನ್ನು** ನಿರ್ಣಯಿಸಲು **ಸಮಿತಿಯ ರಚನೆ.**<br>• ಆನೆ ಸೇರಿದಂತೆ ವನ್ಯಜೀವಿ **ಸಂಘರ್ಷಗಳಿಗೆ ಬೆಳೆ ವಿಮೆಯ** ಸಾಧ್ಯತೆ. ವನ್ಯ ಜೀವಿಗಳ ಹಾನಿಗಳ ವಿರುದ್ಧ |

| ಕ್ರ ಸಂ | ಇಲಾಖೆ | ಯೋಜನಾ ಶೀರ್ಷಿಕೆ | ಶಿಫಾರಸ್ಸುಗಳು |
|---|---|---|---|
| | | ಸಂಘರ್ಷ ಪರಿಹಾರದ ಮೇಲೆ ಅವುಗಳ ಪ್ರಭಾವ | ವಿಮೆಗಾಗಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಇದನ್ನು ಪರಿಶೀಲಿಸಬೇಕಾಗಿದೆ.<br>• ಸಮುದಾಯ ಆಧಾರಿತ ಉಪಕ್ರಮಗಳ ಭಾಗವಾಗಿ, ರೈತರ ಹೊಲಗಳಿಗೆ **ಸಮುದಾಯ ಸೌರ ಬೇಲಿಗಳನ್ನು ನಿರ್ಮಿಸುವ** ಸಾಧ್ಯತೆಯನ್ನು ಅನ್ವೇಷಿಸುವುದು.<br>• ಸಂಘರ್ಷ ತಗ್ಗಿಸುವ ಕ್ರಮಗಳಲ್ಲಿ ಸುತ್ತಮುತ್ತಲಿನ ಪರಿಸರದ ಜ್ಞಾನವಿರುವ ಸಮುದಾಯಗಳ ಪಾಲುದಾರಿಕೆ ಹೆಚ್ಚಿಸುವುದು.<br>• ಪ್ರದೇಶದಲ್ಲಿ ಆನೆಗಳ ಉಪಸ್ಥಿತಿಯನ್ನು ಪತ್ತೆಹಚ್ಚಲು ಮತ್ತು ಮುನ್ನೆಚ್ಚರಿಕೆ ನೀಡಲು **ವೈಲ್ಡ್ ಐಸ್ ಅಭಿವೃದ್ಧಿಪಡಿಸಿದ AI ವ್ಯವಸ್ಥೆಯಂತಹ** ಮುನ್ನೆಚ್ಚರಿಕೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಸಾಧ್ಯತೆಯನ್ನು ಅನ್ವೇಷಿಸಿ. |
| 12 | ಕೃಷಿ ಇಲಾಖೆ | ಕರ್ನಾಟಕ ರಾಜ್ಯದಲ್ಲಿ 2019–20ನೇ ಸಾಲಿನ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ATMA) ಯೋಜನೆಯ ಏಕಕಾಲೀನ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | • ವಿವಿಧ ಕೃಷಿ–ಹವಾಮಾನ ವಲಯಗಳಿಗೆ ಆರ್ಥಿಕ ವರ್ಷದ ಆರಂಭದ ಮೊದಲು ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.<br>• ಹಿಂದಿನ ಉದ್ದೇಶಿತ ಕ್ರಿಯಾಶೀಲರಿಗೆ ಹೆಚ್ಚಿನ ಹಂಚಿಕೆಯನ್ನು ಮಾಡುವುದು<br>• ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಲಹಾ ಸಮಿತಿಯಲ್ಲಿ SC/ST ಮತ್ತು ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯ |

## ಮುಖ್ಯಾಂಶಗಳು – 2021–22

- ಕರ್ನಾಟಕ ಸರ್ಕಾರವು 2021–22ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯದ ರೂ. 100 ಕೋಟಿ ಮೇಲೆ ಇರುವಂತಹ ಬೃಹತ್ ಯೋಜನೆಗಳನ್ನು ಕಡ್ಡಾಯವಾಗಿ ಮೌಲ್ಯಮಾಪನವನ್ನು ಮಾಡಲಾಗುವುದು ಎಂದು ಘೋಷಣೆ ಮಾಡಿದೆ(ಬಜೆಟ್ ಪ್ಯಾರಾ 184). ಈ ಕುರಿತು **ಸರ್ಕಾರಿ ಆದೇಶ ಸಂಖ್ಯೆ: PDS 158 SMC 2021, ದಿನಾಂಕ: 08–10–2021 ಅನ್ನು ಹೊರಡಿಸಲಾಗಿದೆ**. ಅದರಂತೆ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗಿದೆ ಮತ್ತು ಅನುಮೋದಿಸಲಾಗಿದೆ.
- **ಸೇವಾ ಸಿಂಧು ಪೋರ್ಟಲ್ ಮೂಲಕ 39 ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಕಾರ್ಯಕ್ರಮಕ್ಕೆ** ಅರ್ಜಿ ಸಲ್ಲಿಸಿರುತ್ತಾರೆ. 5 ವಿದ್ಯಾರ್ಥಿಗಳು ಇಂಟರ್ನ್‌ಶಿಪ್ ಪೂರ್ಣಗೊಳಿಸಿದ್ದು, ಅವರಿಗೆ ಪ್ರಮಾಣಪತ್ರವನ್ನು ವಿತರಿಸಲಾಗಿದೆ. 5 ವಿದ್ಯಾರ್ಥಿಗಳು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಇಂಟರ್ನ್‌ಶಿಪ್ ಕೈಗೊಳ್ಳುತ್ತಿದ್ದಾರೆ.

ಫಲಿತಾಂಶಗಳು

- ಯುವಕರ ಸಾಮರ್ಥ್ಯ ನಿರ್ಮಾಣ
- ಸರ್ಕಾರದೊಂದಿಗೆ ಕೆಲಸ ಮಾಡಿದ ಅನುಭವ.
- ನೀತಿ ನಿರ್ಧಾರಗಳಿಗಾಗಿ ದತ್ತಾಂಶ ವಿಶ್ಲೇಷಣೆ

- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ **ಭಾರತೀಯ ಆಡಳಿತಾತ್ಮಕ ಫೆಲೋಶಿಪ್ ಕಾರ್ಯಕ್ರಮವನ್ನು** ಪ್ರಾರಂಭಿಸಲು ಯೋಜನಾ ಇಲಾಖೆಯನ್ನು ಬೆಂಬಲಿಸಿದೆ. ನಡ್ಜ್ ಫೌಂಡೇಶನ್‌ನೊಂದಿಗಿನ ನವೀನ ಜ್ಞಾನದ ಸಹಭಾಗಿತ್ವವು ಖಾಸಗಿ

ವಲಯದಿಂದ ಉತ್ತಮ ಪ್ರತಿಭೆಗಳನ್ನು ಆಕರ್ಷಿಸಲು 10 ಕಾರ್ಪೊರೇಟ್ ವಲಯದ ಉನ್ನತ ಕಂಪನಿಗಳ ತಜ್ಞರು ವಿವಿಧ ಇಲಾಖೆಗಳಲ್ಲಿ ಸುಸ್ಥಿರ ಅಭಿವೃದ್ಧಿಯ ವಿಷಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ/ ಕ್ಷೇತ್ರಗಳು – ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ, ಕೃಷಿ, ತೋಟಗಾರಿಕೆ, ಕುಡಿಯುವ ನೀರು, ಸ್ಥಳೀಯ ಆಡಳಿತ, ಆಡಳಿತದಲ್ಲಿ ಸುಧಾರಣೆಗಳು, ಆಸ್ತಿ ಹಣಗಳಿಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ರಾಜ್ಯ ಯೋಜನೆ ಮತ್ತು ನೀತಿ ಇತ್ಯಾದಿ.

- **ಅಭಿವೃದ್ಧಿ ಉಸ್ತುವಾರಿ ಮತ್ತು ಮೌಲ್ಯಮಾಪನ ಕಛೇರಿ(DMEO), ನೀತಿ ಆಯೋಗವು**, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮಾದರಿಯನ್ನು ದೇಶದ ಮುಂದೆ ಪ್ರಸ್ತುತ ಪಡಿಸಿತು ಮತ್ತು ಮಾದರಿಯನ್ನು ಇತರ ರಾಜ್ಯಗಳಲ್ಲಿ ಪರಿಚಯಿಸಲು 18ನೇ ಮಾರ್ಚ್, 30ನೇ ಜುಲೈ 2021 ರಂದು ರಾಜಸ್ಥಾನ ಸರ್ಕಾರ ಮತ್ತು ಅಕ್ಟೋಬರ್ 05, 2021 ರಂದು ವೆಬಿನಾರ್‌ಗಳಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವಿವರವಾದ ಮಾಹಿತಿಯನ್ನು ಪಡೆದಿದೆ.
- **ಅಭಿವೃದ್ಧಿ ಉಸ್ತುವಾರಿ ಮತ್ತು ಮೌಲ್ಯಮಾಪನ ಕಛೇರಿ(DMEO), ನೀತಿ ಆಯೋಗವು,** 2ನೇ ಜೂನ್ 2021 ರಂದು ಜಾಗತಿಕ ಮೌಲ್ಯಮಾಪನ ವಾರದಲ್ಲಿ(31ನೇ ಮೇ–4ನೇ ಜೂನ್ 2021) ಜಾಗತಿಕ ವೇದಿಕೆಯಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಮಾದರಿಯನ್ನು ಪ್ರಸ್ತುತ ಪಡಿಸಿತು.
- ಪರಿಣಾಮಕಾರಿ ವಿಕೇಂದ್ರೀಕೃತ ಯೋಜನೆ ಮತ್ತು ಒಟ್ಟು ದೇಶೀಯ ಉತ್ಪನ್ನದ ಅತ್ಯುತ್ತಮ ಸಂಪನ್ಮೂಲ ಬಳಕೆಗಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಅಂದಾಜು ಮಾಡಲಾಗುತ್ತಿದೆ. ಉಡುಪಿ ಜಿಲ್ಲೆಯ ಮಾದರಿಯಲ್ಲಿ 6000 ಗ್ರಾ.ಪಂ.ಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ.
- ಕರ್ನಾಟಕದಲ್ಲಿ RO ಪ್ಲಾಂಟ್ ಯೋಜನೆಯ ಮೌಲ್ಯಮಾಪನವನ್ನು (2013–14 ರಿಂದ 2020–21) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೂಲಕ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಬೆಂಬಲದೊಂದಿಗೆ ನಡೆಸಲಾಗುತ್ತಿದೆ.

**ಜ್ಞಾನದ ಪಾಲುದಾರಿಕೆಯ ಮೂಲಕ ಸಾಕ್ಷ್ಯ ಆಧಾರಿತ ನೀತಿಯನ್ನು ರೂಪಿಸಲು ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದೊಂದಿಗೆ ಸರ್ಕಾರಕ್ಕೆ ಬೆಂಬಲ**

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರವು ಮಾನವ ಅಭಿವೃದ್ಧಿಯ ಫಲಿತಾಂಶಗಳನ್ನು ಸುಧಾರಿಸುವ ಉದ್ದೇಶದಿಂದ ನಿಯೋಜಿಸಲಾದ ನಿಧಿಗಳ ವಿರುದ್ಧ ಮಾನವ ಅಭಿವೃದ್ಧಿ ಸೂಚಕಗಳನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡಲು ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ದೊಡ್ಡ ಪ್ರಮಾಣದ ದತ್ತಾಂಶವನ್ನು ಸಂಗ್ರಹಿಸುತ್ತದೆ. ಕರ್ನಾಟಕ ಸರ್ಕಾರವು ಇದನ್ನು ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚಕಗಳೊಂದಿಗೆ ಜೋಡಿಸುತ್ತಿದೆ ಮತ್ತು ಉತ್ತಮ ಅಭಿವೃದ್ಧಿ ಫಲಿತಾಂಶಗಳಿಗಾಗಿ ಮತ್ತು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ದತ್ತಾಂಶ ವಿಶ್ಲೇಷಣೆ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿ ಪಡಿಸುತ್ತಿದೆ. ಈ ಉದ್ದೇಶಕ್ಕಾಗಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದ ಮೂಲಕ ಶೈಕ್ಷಣಿಕ ಪರಿಣಿತಿ ಹೊಂದಿದ ಸಂಸ್ಥೆಗಳಾದ ಐಐಐಟಿ–ಬಿ (IIIT–B) ಮತ್ತು ಸಾರ್ವಜನಿಕ ವ್ಯವಹಾರಗಳ ಕೇಂದ್ರಗಳ ಸಹಾಯದ ಅಗತ್ಯವಿದೆ.

2019–2020 ರಿಂದ 2023–24 ರವರೆಗೆ ಐದು ವರ್ಷಗಳ ಕಾಲ ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಫಲಿತಾಂಶಗಳನ್ನು ಸಾಧಿಸಲು ಪರಿಣಾಮಕಾರಿ ಮತ್ತು ಸಕ್ರಿಯಗೊಳಿಸುವ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಬೆಂಬಲಿಸಲು ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದೊಂದಿಗೆ ಜ್ಞಾನ ಪಾಲುದಾರಿಕೆಯನ್ನು ಅಭಿವೃದ್ಧಿಪಡಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ನೋಡಲ್ ಏಜೆನ್ಸಿಯಾಗಿದೆ. ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರವು, ಉತ್ತಮ ಆಡಳಿತ ಮತ್ತು ಸುಸ್ಥಿರ

ಅಭಿವೃದ್ಧಿ ಗುರಿಗಳು–2030 ಕಾರ್ಯಸೂಚಿಯನ್ನು ಸಾಧಿಸಲು ಸರ್ಕಾರಕ್ಕೆ ಸಹಾಯ ಮಾಡಲು, ಸರ್ಕಾರಿ ದತ್ತಾಂಶ, ಡೇಟಾ ಸೈನ್ಸ್ ತಂತ್ರಜ್ಞಾನಗಳು, ಶೈಕ್ಷಣಿಕ ಉತ್ಕೃಷ್ಟತೆ ಮತ್ತು ಆಡಳಿತ ಅಪ್ಲಿಕೇಶನ್‌ಗಳನ್ನು ಒಟ್ಟುಗೂಡಿಸುವ ಈ ರೀತಿಯ ಮೊದಲ ಕೇಂದ್ರವಾಗಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳ ವರದಿಗಳು – 1,2,3,4 ಮತ್ತು 5 ಗ್ರಾಮ ಪಂಚಾಯತಿ ಮಟ್ಟದವರೆಗೆ ಅಗತ್ಯವಿರುವ ಕ್ಷೇತ್ರ ಪರಿಸ್ಥಿತಿ ಮತ್ತು ಮಧ್ಯಸ್ಥಿಕೆಗಳನ್ನು ಪ್ರತಿಬಿಂಬಿಸಲು ಸಿದ್ಧಪಡಿಸಲಾಗಿದೆ.

**ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದೊಂದಿಗೆ ಯೋಜನೆಗಳು**

| ಕ್ರ.ಸಂ. | ಅಧ್ಯಯನದ ಹೆಸರು |
|---|---|
| 1. | ಡೇಟಾ ಏಕೀಕರಣ–ಜನರು, ಭೂಮಿ ಮತ್ತು ಹಣಕಾಸು |
| 2. | ಕರ್ನಾಟಕ ರಾಜ್ಯದಲ್ಲಿನ ಬಡತನದ ವಿಶ್ಲೇಷಣೆ |
| 3. | ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚಕಗಳಿಗಾಗಿ ದತ್ತಾಂಶ ವಿಶ್ಲೇಷಣೆ 1,2,3,4 &5 |
| 4. | ಮಹತ್ವಾಕಾಂಕ್ಷೆಯ ಜಿಲ್ಲೆಗಳ ಕಾರ್ಯಕ್ಷಮತೆ ಸೂಚಕಗಳ ವಿಶ್ಲೇಷಣೆ |
| 5. | ಭೂ ಬಳಕೆಯ ಮಾದರಿ, ಬಂಜರು ಭೂಮಿ ಮತ್ತು ಅರಣ್ಯ ಹೊದಿಕೆಯ ವಿಶ್ಲೇಷಣೆ |
| 6. | ಅಪೌಷ್ಟಿಕತೆಯ ವರದಿ : ಕರ್ನಾಟಕದಾದ್ಯಂತ ಮಕ್ಕಳಲ್ಲಿ ಹರಡುವಿಕೆ |
| 7. | ಕರ್ನಾಟಕ ಸಮಗ್ರ ಪೌಷ್ಟಿಕಾಂಶ ಮಿಷನ್ ನಿಂದ ದೇವದುರ್ಗ ಮತ್ತು ಚಿಂಚೋಳಿಯಲ್ಲಿ ಪೌಷ್ಠಿಕಾಂಶ ಯೋಜನೆಯಡಿಯಲ್ಲಿ 36000 ಕುಟುಂಬಗಳ ದತ್ತಾಂಶ ವಿಶ್ಲೇಷಣೆ |
| 8. | ಅನಾರೋಗ್ಯ ಮತ್ತು ಮರಣ ಪ್ರವೃತ್ತಿಗಳಿಗಾಗಿ ಇ–ಜನ್ಮ ಡೇಟಾದ ವಿಶ್ಲೇಷಣೆ |

**ಆಯೋಜಿಸಿದ ಸಭೆಗಳು:–**

ಸಾಮಾನ್ಯ ಸಭೆ, ಆಡಳಿತ ಮಂಡಳಿ ಸಭೆ ಮತ್ತು ತಾಂತ್ರಿಕ ಸಮಿತಿ ಸಭೆಯ ವಿವರಗಳು:

| ಸಾಮಾನ್ಯ ಮಂಡಳಿ ಸಭೆ | ಆಡಳಿತ ಮಂಡಳಿ ಸಭೆ | ತಾಂತ್ರಿಕ ಸಮಿತಿ ಸಭೆ |
|---|---|---|
| – | 24ನೇ ಆಡಳಿತ ಮಂಡಳಿ ಸಭೆ<br>ದಿನಾಂಕ: 17–03–2021<br>25ನೇ ಆಡಳಿತ ಮಂಡಳಿ ಸಭೆ<br>ದಿನಾಂಕ: 30–08–2021<br>26ನೇ ಆಡಳಿತ ಮಂಡಳಿ ಸಭೆ<br>ದಿನಾಂಕ: 21–01–2022 | 51ನೇ ತಾಂತ್ರಿಕ ಸಮಿತಿ ಸಭೆ<br>ದಿನಾಂಕ: 07–09–2021<br>52ನೇ ತಾಂತ್ರಿಕ ಸಮಿತಿ ಸಭೆ<br>ದಿನಾಂಕ: 01–12–2021<br>ಮತ್ತು 06–12–2021<br>53ನೇ ತಾಂತ್ರಿಕ ಸಮಿತಿ ಸಭೆ<br>ದಿನಾಂಕ: 20–01–2022 |

**ಲೆಕ್ಕ ಶೀರ್ಷಿಕೆ** **3451-11-092-0-05 (101) -ವೇತನ**
**3451-11-092-0-05 (115)-ಗುತ್ತಿಗೆ/ ಹೊರಗುತ್ತಿಗೆ**
**3451-11-092-0-05 (103) -ಸಾಮಾನ್ಯ.**

**2021–22 ನೇ ಸಾಲಿನ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ರಶೀದಿಗಳು ಮತ್ತು ವೆಚ್ಚಗಳು (01–04–2021 to 31.03.2022)**

| | ಲೆಕ್ಕಶೀರ್ಷಿಕೆ | ಬಿಡುಗಡೆಯಾದ ಅನುದಾನದ ಮೊತ್ತ | ವಿವರಗಳು | ವೆಚ್ಚ |
|---|---|---|---|---|

| | | | | |
|---|---|---|---|---|
| 1 | (01.04.2021) ರಂತೆ ಆರಂಭಿಕ ಶಿಲ್ಕು | 4,57,87,030 | | |
| 2 | 3451-00-092-0-05-101 (ಸಹಾಯಾನುದಾನ ವೇತನ) | 1,07,00,000 | ವೇತನ ಮತ್ತು ಭತ್ಯೆಗಳು, ಟಿಎ ಬಿಲ್‌ಗಳು ಮತ್ತು ಲೀವ್ ಎನ್‌ಕ್ಯಾಶ್‌ಮೆಂಟ್ ಬಿಲ್‌ಗಳು | 1,19,35,556 |
| 3 | 3451-00-092-0-05-115 (ಗುತ್ತಿಗೆ/ ಹೊರಗುತ್ತಿಗೆ) | 90,00,000 | ಹೊರಗುತ್ತಿಗೆ ನೌಕರರಿಗೆ ವೇತನ | 1,05,36,646 |
| 4 | 3451-00-092-0-05-103 (ಸಹಾಯಾನುದಾನ ಸಾಮಾನ್ಯ) | 6,80,00,000 | ಯೋಜನೆಗಳ ಮೌಲ್ಯಮಾಪನ ವೆಚ್ಚಗಳು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಪಾವತಿ (ಅಧಿಸೂಚನೆ, EMD ವೆಚ್ಚಗಳ ಮರುಪಾವತಿ) | 4,08,44,312 |
| 5 | FD ಯ ಮತ್ತು MOD ಗಳ ಮೇಲೆ ಬಡ್ಡಿ | 17,36,251 | MPI ಮತ್ತು ಮೊಬೈಲ್ ಅಪ್ಲಿಕೇಶನ್‌ಗೆ ಪಾವತಿ | 2,65,500 |
| 6 | ಏಜೆನ್ಸಿಗಳಿಂದ EMD, ಅರ್ಜಿ ಶುಲ್ಕ ಮತ್ತು ನಡ್ಜ್‌ನಿಂದ ಮರುಪಾವತಿ ಮತ್ತು ಇ-ಆಡಳಿತದಿಂದ ಮರುಪಾವತಿ | 6,83,644 | ಯೋಜನಾ ಇಲಾಖೆಗಾಗಿ ಕಂಪ್ಯೂಟರ್‌ಗಳು ಮತ್ತು ಪ್ರಿಂಟರ್‌ಗಳನ್ನು ಖರೀದಿಸಲು ಪಾವತಿ ಮಾಡಲಾಗಿದೆ | 10,52,887 |
| 7 | ಗ್ರಂಥಾಲಯವನ್ನು ನವೀಕರಿಸಲು ಯೋಜನಾ ಇಲಾಖೆಯಿಂದ ಠೇವಣಿ | 12,93,370 | CODR ಗೆ ಪಾವತಿ | 3,80,00,000 |
| 8 | DES ನಿಂದ ಠೇವಣಿ | 1,40,000 | ಡಿಸಿಷನ್ ಸಪೋರ್ಟ್ ಸಿಸ್ಟಮ್ ಗಳ ಪಾವತಿಸಿದ ಶುಲ್ಕ | 40,00,000 |
| | | | ATI ಮೈಸೂರು ಗೆ ಪಾವತಿಸಿದ ಶುಲ್ಕ | 1,58,840 |
| | | | UNDP ಮತ್ತು SDGCC ಗೆ ಪಾವತಿಸಿದ ಶುಲ್ಕ | 1,32,00,000 |
| | | | ವಾಹನ ಬಾಡಿಗೆ ಬಿಲ್‌ಗಳು ಮತ್ತು ನಿರ್ವಹಣೆ | 20,29,133 |

| | | | | |
|---|---|---|---|---|
| | | | ಕೆಇಎ ಕಾರ್ಯಾಚರಣೆಯ ವೆಚ್ಚ (ಸಭೆ, ಅಂಚೆ, ದೂರವಾಣಿ, ಆಡಿಟ್ ಶುಲ್ಕಗಳು, ಸೊಸೈಟಿ ನವೀಕರಣ ಶುಲ್ಕಗಳು, ಕಾರ್ಯಾಗಾರ ಮತ್ತು ತರಬೇತಿ ಮತ್ತು ಇತ್ಯಾದಿ) | 14,00,646 |
| | | | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಗೆ ಪಾವತಿ | 10,80,000 |
| | | | ಎಸ್‌ಡಿಜಿ ಸಭೆ ಮತ್ತು ಸದಸ್ಯರುಗಳಿಗೆ ಸಭಾ ಭತ್ಯೆ ಶುಲ್ಕ ಪಾವತಿ | 1,48,845 |
| | | 13,73,40,295 | ಒಟ್ಟು | 12,46,52,365 |

**ಭವಿಷ್ಯದ ಯೋಜನೆಗಳು**

- ಪ್ರಮುಖ ಕಾರ್ಯಕ್ರಮಗಳ ಪರಿಣಾಮಕಾರಿ ಫಲಿತಾಂಶಗಳಿಗಾಗಿ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು–2030 ರ ಕಾರ್ಯಸೂಚಿಗಳನ್ನು ಸಾಧಿಸಲು ಸರ್ಕಾರಕ್ಕೆ ಸಾಕಷ್ಟು ಒಳಹರಿವುಗಳನ್ನು ಒದಗಿಸಲು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಆಯವ್ಯಯ ಘೋಷಣೆಯ ಪ್ಯಾರಾ 184ರಂತೆ, ರೂ.100 ಕೋಟಿಗಳಿಗಿಂತ ಹೆಚ್ಚು ವಾರ್ಷಿಕ ಅನುದಾನವಿರುವ ಮತ್ತು ಫಲಾನುಭವಿಗಳ ವ್ಯಾಪಕ ವ್ಯಾಪ್ತಿಯನ್ನು ಹೊಂದಿರುವ ಪ್ರಮುಖ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮೌಲ್ಯಮಾಪನದ ಮೇಲೆ ಕೇಂದ್ರೀಕರಿಸಲು ಪ್ರಸ್ತಾಪಿಸುತ್ತದೆ.
- ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಮಧ್ಯಂತರ ತಿದ್ದುಪಡಿಗಳಿಗೆ ಸಾಕಷ್ಟು ಪ್ರತಿಕ್ರಿಯೆಯನ್ನು ಒದಗಿಸಲು ಸಹ ಏಕಕಾಲೀನ ಮೌಲ್ಯಮಾಪನಗಳ ಮೇಲೆ ಕೇಂದ್ರೀಕರಿಸುತ್ತದೆ.
- ರಾಜ್ಯಗಳಲ್ಲಿ ಮೌಲ್ಯಮಾಪನ ವ್ಯವಸ್ಥೆಗಳನ್ನು ಸ್ಥಾಪಿಸಲು ಅಭಿವೃದ್ಧಿ ಉಸ್ತುವಾರಿ ಮತ್ತು ಮೌಲ್ಯಮಾಪನ ಕಛೇರಿ ಉಪಕ್ರಮವನ್ನು ಬೆಂಬಲಿಸುತ್ತದೆ.
- ಯುವ ಸಂಶೋಧನಾ ಸಿಬ್ಬಂದಿಯ ಸಾಮರ್ಥ್ಯವನ್ನು ನಿರ್ಮಿಸಲು ಆಂತರಿಕ ಅಧ್ಯಯನಗಳನ್ನು ಕೈಗೊಳ್ಳಲಾಗುತ್ತದೆ. ಕ್ಷೇತ್ರ ವಾಸ್ತವತೆಗಳನ್ನು ಮೌಲ್ಯಮಾಪನ ವರದಿಗಳಲ್ಲಿ ಸೆರೆಹಿಡಿಯಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ವಾಸ್ತವಿಕ ದತ್ತಾಂಶ ಸಂಗ್ರಹಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತದೆ.
- ಮಾನವ ಅಭಿವೃದ್ಧಿ ವರದಿ –2021 ಅನ್ನು ತಯಾರಿಸಲು ತಾಂತ್ರಿಕ ಬೆಂಬಲವನ್ನು ಒದಗಿಸುತ್ತಿದೆ.
- ಕರ್ನಾಟಕದ ಆರ್ಥಿಕ ಸಮೀಕ್ಷೆ –2021–22 ಅನ್ನು ತಯಾರಿಸಲು ತಾಂತ್ರಿಕ ಬೆಂಬಲವನ್ನು ಒದಗಿಸುತ್ತಿದೆ.
- ಯುವ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ವಾಂಸರ ಸಾಮರ್ಥ್ಯ ನಿರ್ಮಾಣಕ್ಕಾಗಿ ಇಂಟರ್ನ್‌ಶಿಪ್ ಕಾರ್ಯಕ್ರಮವನ್ನು ಬಲಪಡಿಸುತ್ತಿದೆ.

- ಸಾಕ್ಷ್ಯಾಧಾರಿತ ನೀತಿಗಾಗಿ ವೈಜ್ಞಾನಿಕ ಫಲಿತಾಂಶಗಳನ್ನು ಸೆಳೆಯಲು ಮೌಲ್ಯಮಾಪನ ಅಧ್ಯಯನಗಳು ಮತ್ತು ದತ್ತಾಂಶ ವಿಶ್ಲೇಷಣೆಯಲ್ಲಿ ದ್ವಿತೀಯ ಮತ್ತು ಪ್ರಾಥಮಿಕ ದತ್ತಾಂಶವನ್ನು ಸಂಯೋಜಿಸಲು, ಪ್ರಾಧಿಕಾರವು ಕರ್ನಾಟಕ ಮುಕ್ತ ದತ್ತಾಂಶ ಉಪಕ್ರಮ, ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿ ಸಮನ್ವಯ ಕೇಂದ್ರದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ.
- ರಾಜ್ಯದಲ್ಲಿ ದೃಢವಾದ ಉನ್ನತ ಗುಣಮಟ್ಟದ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಸ್ಥಾಪಿಸಲು.

*******